# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2020-21ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಣಿ ತಂಡ ನೇಮಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಕೃಇ 83 ಕೃಕೈಉ 2020, ದಿ:07.08.2020

2. ಕೃಷಿ ಆಯುಕ್ತರ ಪತ್ರ ಸಂಖ್ಯೆ:ಬೆಸವಿ/ಬೆಸ-ಸಹಾಯವಾಣಿ/2020-21, ದಿನಾಂಕ:01.09.2020

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ, 2020-21ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯು ಅಭಿವೃದ್ಧಿ ಪಡಿಸಿರುವ ಮಾರ್ಪಡಿಸಿದ ರೈತರ ಮೊಬೈಲ್ ಆಪ್ ಬಳಸಿಕೊಂಡು ಅನುಷ್ಠಾನಗೊಳಿಸಲು ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದ ಕಂಡಿಕೆ-(5) ರಲ್ಲಿ ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk), ಈ ಎರಡೂ ತಂಡಗಳು ಒಂದೇ ಕಚೇರಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಕೃಷಿ ಆಯುಕ್ತರ ಪತ್ರದಲ್ಲಿ, ಕೃಷಿ ಆಯುಕ್ತಾಲಯದಲ್ಲಿ ಬೆಳೆ ಸಮೀಕ್ಷೆ ಸಹಾಯವಾಣಿ ನೇಮಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವಂತೆ ಕೋರಲಾಗಿರುತ್ತದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೆಳೆ ಸಮೀಕ್ಷೆ ಸಹಾಯವಾಣಿ ತಂಡ ಕಳೆದ ಎರಡು ವರ್ಷಗಳಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ) ಇವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಾರ್ಯದಲ್ಲಿ ಅನುಭವವಿದ್ದ ಕಾರಣ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯ ಅಭಿಪ್ರಾಯ ಪಡೆದು ಹಾಗೂ 2020-21ನೇ ಸಾಲಿನ ಬೆಳೆ ಸಮೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಸಲುವಾಗಿ ಹಿಂದಿನ ಸಾಲಿನಲ್ಲಿ ನೀಡಿದ್ದ ಸಹಾಯವಾಣಿ ದೂರವಾಣಿ ಸಂಖ್ಯೆಯನ್ನು ರೈತರಿಗೆ ಹಂಚಿ, ಹೆಚ್ಚಿನ ಕರೆಗಳು ಬರುತ್ತಿದ್ದರಿಂದ, ತುರ್ತಾಗಿ ಕಿಯೋನಿಕ್ಸ್ ಸಂಸ್ಥೆಯಿಂದ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಯನ್ನು ಪಡೆದು, ಅದರನ್ವಯ ರೂ.98,35,536.00 ಗಳ ವೆಚ್ಚದಲ್ಲಿ ಸಹಾಯವಾಣಿ ತಂಡವನ್ನು ನೇಮಿಸಿ, ದಿನಾಂಕ:17.08.2020 ರಂದು ಕಾರ್ಯಾದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಸಹಾಯವಾಣಿ ತಂಡವನ್ನು ನೇಮಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಕೃಇ-ಕೃಕೈಉ/131/2020, ಬೆಂಗಳೂರು, ದಿ:05.08.2021.**

2020-21ನೇ ಸಾಲಿನಲ್ಲಿ, ರಾಜ್ಯದಲ್ಲಿ ಬೆಳೆ ಸಮೀಕ್ಷೆ ಕಾರ್ಯಕ್ರಮವನ್ನು ಸುಸೂತ್ರವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಕೃಷಿ ಆಯುಕ್ತಾಲಯದ ಕಾರ್ಯಾದೇಶ **ಸಂಖ್ಯೆ:CSS/helpdesk-keonics/2020-21, ದಿನಾಂಕ:17.08.2020** ರಲ್ಲಿ ಬೆಳೆ ಸಮೀಕ್ಷೆ ಸಹಾಯವಾಣಿ ತಂಡವನ್ನು (**helpdesk**) ನೇಮಿಸಿರುವ ಹಾಗೂ ಸದರಿ help Desk ನಿರ್ವಹಣೆಗೆ ತಗುಲಿರುವ ವೆಚ್ಚ ರೂ.98,35,536.00 ಗಳನ್ನು ಅನುಬಂಧದಲ್ಲಿ ವಿವರಿಸಿರುವಂತೆ, 2020-21ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ:2401-00-110-0-07 ರಡಿ ಒದಗಿಸಲಾಗಿದ್ದ ಅನುದಾನದಿಂದ ಭರಿಸಿರುವ ಕ್ರಮಕ್ಕೆ ಸರ್ಕಾರದ ಘಟನೋತ್ತರ ಅನುಮೋದನೆ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 01 ಟಿಎಫ್‌ಪಿ 2021, ದಿನಾಂಕ:05.04.2021 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

P. S... 5/8/2021

(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

5/8

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆ.ಸು(ಇ-ಆಡಳಿತ) ಇಲಾಖೆ.
4. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
5. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.

6. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, 2 ನೇ ಮಹಡಿ, TTMC A ಬ್ಲಾಕ್, BMTC-ಶಾಂತಿನಗರ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ

******

ಸರ್ಕಾರದ ಆದೇಶ ಸಂಖ್ಯೆ:ಕೃಇ-ಕೃಕೈಉ/131/2020, ದಿ:05.08.2021 ರ ಅನುಬಂಧ

| Costing for Helpdesk Support | | | | |
|---|---|---|---|---|
| Sl. No. | Description | Quantity | Unit Cost / month | Total Amount |
| 1 | Cloud based Software with Virtual NO + Call forwarding with IVRS Facilities, call tracking, etc options | 1 | 40250 | 40250 |
| 2 | Technical Helpdesk Executives (per person with MCA/BE qualification) Per Person (Min 4 Resources required at the initial stage) with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 8 | 70150 | 561200 |
| 3 | Manager who is an experienced computer graduates from BE or MCA for managing the helpdesk with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 1 | 93150 | 93150 |
| | **Total Amount** | | | **694600** |
| | **GST @ 18%** | | | **125028** |
| | **Grand Total** | | | **819628** |
| Total per month: Rupees Eight Lakhs Nineteen Thousand Six Hundred and Twenty Eight Only | | | | |
| Total per year: Rupees Ninety Eight Lakhs Thirty Five Thousand Five Hundred and Thirty Six Only (Rs.98,35,536/-) | | | | |

(P. Sathya) 5/8/21
(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)